ಕಥನವನ್ನು ಉಣಬಡಿಸಿದ ಜಗತ್ತಿನ ಕೃತಿಗಳು ಎಂದು ನಾವು ಯಾವುದಾವುದನ್ನು ಗುರುತಿಸುತ್ತೇವೆ ಅವೆಲ್ಲವೂ ಈ ರೀತಿಯ ವ್ಯವಹಾರದಿಂದ ಹುಟ್ಟಿದ ಉತ್ಪನ್ನಗಳಲ್ಲ ಎಂಬುದು ಗಮನಿಸಬೇಕಾದ ಸಂಗತಿ. ಪೂರ್ಣ ರಂಜನೆ, ಅರ್ಧ ಸತ್ಯ ಮತ್ತು ಖಾಲಿ ಮೌಲ್ಯ ಎಂಬ ಯಶಸ್ವಿ ಸಿದ್ಧಸೂತ್ರದ ವ್ಯಭಿಚಾರಿ ಭಾವಗಳನ್ನೇ ಕೇಂದ್ರವಾಗಿಸಿಕೊಂಡ ಕಥನ ಸ್ವರೂಪವು ತಾತ್ಕಾಲಿಕವಾಗಿ ಒಂದು ಗುಂಪನ್ನು ಉದ್ದೀಪಿಸುವ ಪ್ರಚಂಡ ಶಕ್ತಿ ಹೊಂದಿರುತ್ತದೆ. ಕ್ರಾಂತಿಯ ಮಹತ್ವ, ಧರ್ಮ ಸ್ಥಾಪನೆ, ದೇಶ ಭಕ್ತಿ, ಅಸಮಾನತೆ ನಿವಾರಣೆಯಂಥ ಉದ್ದೇಶ ಸಾಧನೆ ಕಥನಗಳೂ ಕೂಡ ಈ ಗುಂಪಿನ ಅಡಿಯಲ್ಲೇ ಬರುತ್ತವೆ. ಮನರಂಜನೆಯ ತಳಪಾಯ ಸಿಕ್ಕಿಬಿಟ್ಟರಂತೂ ಇವುಗಳಿಗೆ ಎಲ್ಲಿಲ್ಲದ ಬೇಡಿಕೆ. ಪ್ರಚೋದನೆ ಮತ್ತು ರಂಜನೆಯೇ ಮೇಲುಗೈ ಪಡೆದಾಗ ಆ ಕಥನವು ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತದೆ. ಸಾಹಿತ್ಯದ ಓದು (ಅಥವಾ ಯಾವುದೇ ಕಲೆ) ನಮಗೆ ಪರಾಮರ್ಶೆಯ ಸಂಯಮವನ್ನು ಕಲಿಸಬೇಕೇ ವಿನಹ ರಾಗದ್ವೇಷದ ಉದ್ರೇಕವನ್ನು ಉದ್ದೀಪಿಸಬಾರದು. ದುರಂತವೆಂದರೆ ಈ ಸಿದ್ಧಸೂತ್ರಗಳು ಒಂದು ರೀತಿಯ ಸನ್ನಿಪಾತವನ್ನು ಓದುಗ–ನೋಡುಗ ವಲಯದಲ್ಲಿ ಉಂಟುಮಾಡುತ್ತದೆ, ಗಂಭೀರ ಬರೆಹಗಾರರು ಪ್ರಾಜ್ಞ ಓದುಗರು ಕೂಡ ಇದಕ್ಕೆ ಬಲಿಯಾಗಿದ್ದಾರೆ, ಆಗುತ್ತಲೇ ಇರುತ್ತಾರೆ.

## ಕಥನವು ರಸ, ಧ್ವನಿ, ಔಚಿತ್ಯ, ಮೌಲ್ಯಗಳನ್ನು ಒಳಗೊಂಡಿರಬೇಕೆ?

ದಾಸ್ತೋವಸ್ಕಿಯ ಕ್ರೈಂ ಅಂಡ್ ಪನಿಷ್ಮೆಂಟ್, ಪುಟ್ಟಪ್ಪರ ಮಲೆಗಳಲ್ಲಿ ಮದುಮಗಳು, ಭೈರಪ್ಪರ ಗೃಹಭಂಗ, ಇವುಗಳನ್ನೇ ತೆಗೆದುಕೊಳ್ಳಿ ಅಥವಾ ಅಕಿರಾ ಕುರಸೋವಾರ ಕಾಗೆಮುಷಾ, ಬರ್ಗಮನ್ನರ ಸವೆಂಥ್ ಸೀಲ್, ಸತ್ಯಜಿತ್ ರೇ ಅವರ ನಾಯಕ್ ಮುಂತಾದ ಸಿನಿಮಾವನ್ನೇ ಗಮನಿಸಿ ಅಲ್ಲೇನೋ ಉಪದೇಶ ಮಾಡುವ ಧಾವಂತ ಇಲ್ಲ, ಜಗತ್ತನ್ನು ಬದಲಾಯಿಸಿಬಿಡುವ ಬೆಪ್ಪುತನವಿಲ್ಲ, ಧರ್ಮ, ರಾಜಕೀಯ, ಸಮಾಜ, ಸಂಬಂಧ, ಹಣ, ಅಧಿಕಾರ, ಜನಪ್ರಿಯತೆ ಇತ್ಯಾದಿ ಇತ್ಯಾದಿ ಮನುಷ್ಯ ವ್ಯವಸ್ಥೆಯ ಎಲ್ಲವೂ ಕಥನದಲ್ಲೇ ಬೆರೆತು ಅದೇ ಮೂಲವಾಗದೇ, ಮನುಷ್ಯ ಭಾವಮುಖೇನ ಸ್ಪರ್ಶಿಸಿ ನಿರೀಕ್ಷಿಸುತ್ತದೆ. ಅಲ್ಲಿ ರಸವೂ ಇದೆ, ಅದಕ್ಕೊಂದು ಧ್ವನಿಯೂ ಇದೆ, ಅದನ್ನು ಹೇಗೆ ಎಷ್ಟು ಬಳಸಬೇಕು ಎಂಬ ಔಚಿತ್ಯವೂ ಇದೆ. ಇವೆಲ್ಲದರ ಹದಪಾಕವನ್ನು ಅಚ್ಚಿನಲ್ಲಿ ಹಾಕಿ ಕೃತಿಗೊಂದು ಸೌಂದರ್ಯ ಮತ್ತು ಮೌಲ್ಯ ಒದಗಿಸುವ ಜಾಣ್ಮೆಯೂ ಇದೆ.

"ಕತೆ ಹೊಡೀಬೇಡ" ಎಂಬುದನ್ನು ಒಬ್ಬರ ಮಾತನ್ನು ತಿರಸ್ಕರಿಸಲಿಕ್ಕೆ ನಾವು ಬಳಸುತ್ತೇವೆ. ಈ ರೂಪಕ ತುಂಬಾ ಅರ್ಥವತ್ತಾಗಿದೆ! ಕಥನವು ಕೇವಲ ಶಾಬ್ದಿಕ ಹಾವ ಭಾವ ನಿರೂಪಣೆಯಲ್ಲ. ಕತೆಗಾಗಿ ಕತೆ, ಎಂಬ ಸ್ವರೂಪವನ್ನು ಪ್ರಮಾಣವಾಗಿಟ್ಟುಕೊಂಡರೆ ಎಲ್ಲಾ ಕಲ್ಲೂ ಕಲಾಕೃತಿಯೇ, ಎಲ್ಲರೂ ಕತೆಗಾರರೇ! ಆದ್ದರಿಂದ ಮೌಲ್ಯ ಪ್ರಜ್ಞೆ ಇಲ್ಲಿ ಬಹಳ ಮುಖ್ಯ. ಹೇಗೆ ಒಂದು ಕಲ್ಲು ಶಿಲ್ಪಿಯಿಂದ ಸಂಸ್ಕಾರ ಪಡೆದು ಕಲಾಕೃತಿಯಾಗಿ ಮೌಲ್ಯ ಪಡೆಯುತ್ತದೆಯೋ ಹಾಗೇ ಕಥನಕಾರ ಕಥೆಯೆಂಬ ಒಣಮಾತಿಗೆ ಸಂಸ್ಕಾರ ನೀಡಿ ಸಾಹಿತ್ಯಿಕ ಮೌಲ್ಯ ಒದಗಿಸಬೇಕು. "ಕತೆಯೆಲ್ಲಾ ಸಾಹಿತ್ಯ, ಪ್ರತಿಭೆ ಪ್ರದರ್ಶನವೆಲ್ಲಾ ಕಲೆ" ಎಂಬ ಸಾಮಾನ್ಯ ಧೋರಣೆಯ ಪ್ರಚಾರದ ದೂಳು ಹೆಚ್ಚಾಗಿ ಈ ಸೂಕ್ಷ್ಮಗಳು ಗೋಚರಿಸುತ್ತಿಲ್ಲ.

ಲೇಖಕರು ಹೊಸ ತಲೆಮಾರಿನ ಪ್ರತಿಭಾಶಾಲಿ ಕಾದಂಬರಿಕಾರರು.
'ನನ್ನಿ', 'ಗ್ರಸ್ತ', 'ಕರ್ಮ' ಅವರ ಪ್ರಕಟಿತ ಕಾದಂಬರಿಗಳು.